ಬೇಕಾಗುತ್ತದೆ. ಬೆಂಗಳೂರು ನಗರದಲ್ಲಿರತಕ್ಕ ಕಳವಳನ್ನು ೯೮ ಲಾರಿಗಳಿಂದ ತೆಗಿಸಲಿಕ್ಕೆ ಸಾಧ್ಯವಿಲ್ಲ. ಎಷ್ಟು ಜನ ಹೆಲ್ತ್ ಇನ್ಸ್‌ಪೆಕ್ಟರ್ ಹುದ್ದೆಗಳನ್ನು ಕ್ರಿಯೇಟ್ ಮಾಡಿದ್ದೀರಿ, ಅಷ್ಟು ಲಾರಿಗಳು ಬೇಕಾಗುತ್ತವೆ. ಇವೊತ್ತು ಬೆಂಗಳೂರು ನಗರವನ್ನು ಸ್ವಚ್ಛತೆಯಿಂದ ಇಡದೇ ಹೋದರೆ ಕ್ರಿಮಿಕೀಟಗಳು ಉತ್ಪತ್ತಿಯಾಗಿ ನಾಳೆ ಕಾಲರ ಬರಲಿಕ್ಕೆ ಅವಕಾಶವಾಗುತ್ತದೆ. ಸಾಧ್ಯವಾದಷ್ಟು ಬೇಗ ನೀವು ಲಾರಿಗಳನ್ನ ಕೊಂಡುಕೊಳ್ಳದೇ ಹೋದರೆ ಬಹಳ ತೊಂದರೆಯಾಗುತ್ತದೆ. ಬೇಸಿಗೆ ಕಾಲದಲ್ಲಿ ಕಾಲರ ಬರುವ ಸೂಚನೆ ಇರುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತೀರಾ ಎನ್ನುವುದನ್ನು ತಿಳಿಸಬೇಕು.

ಶ್ರೀ ಧರ್ಮಸಿಂಗ್.—ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಕಳವಳವನ್ನು ವ್ಯಕ್ತ ಪಡಿಸಿದ್ದಾರೆ. ಅವರು ಹೇಳಿರತಕ್ಕದ್ದು ನಿಜ. ಈಗ ನಾವು ಬೆಂಗಳೂರು ನಗರಕ್ಕೆ ಸಾಕಷ್ಟು ಲಾರಿಗಳು ಬೇಕು ಎಂದು ವಿಚಾರ ಮಾಡುತ್ತಿದ್ದೇವೆ. ಬೆಂಗಳೂರು ನಗರದ ಎಲ್ಲ ಸದಸ್ಯರು ಕೊಟ್ಟಿರತಕ್ಕ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

World Bank Assitance to Sericulture Development

226 SRI M. C. BASAPPA (Chamarajanagar).—Will the Minister for Small Scale Industries and Sericulture be pleased to state.—

(a) the amount of Assistance given from World Bank for the devdlopment of Sericulture in the State ;

(b) the period in which the assistance is to be utilised:

(c) various schemes envisaged under the World Bank Project?

SMT. RENUKA RAJENDRAN (Minister for Small Scale Industries and Sericulture.—

(a) Rs. 45.36 crores.

(b) Five years 1980-81 to 1984-85.

(c) (1) On-Farm Credit (Rs. 000)

Mulberry Plantation 1		14,000
Equipment 2		17,500
Silk-worm Rearing Houses 3		18,900
(2) Credit for establishment of Reeling units Cottage basins 4		16,000
Sub-total-Credit		66,400
(3) Department of Sericulture		
Grainages	...	86.203
Hatcheries	...	73,377
Model Hatcheries	...	5,092
Technical Service Centres	...	85,784
Mobile Demonstration Units	...	1,149
Training Schools	...	7,713

Cocoon Markets	...	25,300
Filature	...	5,953
Incremental Administrative cost Department of Sericulture	...	25,593
Sub-Total		3,16,164
(4) Karnataka Silk Industries Corporation Ltd.,		
Filature	...	42,400
Spun Silk Mills	...	83,220
Headquarters and Workshop	...	6,100
Net Inc. working Capital	...	3,883
Sub-Total—Silk Industries		1,35,603
(5) Research	...	67,120
Technical Assistant/study tours	...	19,858
Project Evaluation study	...	1,520
Base cost estimates	...	6,06,665
Physical Contingencies	...	37,025
Price Contingencies	...	1,54,773
Total Project Cost	...	7,98,463

1 3,500 Hectares at Rs. 4,000 per hectare
2 3,500 Hectares at Rs. 5,000 per hectare
3 Houses at Rs. 9,000 each
4 500 units at Rs. 32,000 each

ಶ್ರೀ ಎಂ. ಪಿ. ಬಸಪ್ಪ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಈ ಯೋಜನೆ ೧೯೮೦-೮೧ ರಿಂದ ೧೯೮೪-೮೫ರ ವರೆಗೆ ಜಾರಿಯಲ್ಲಿರುತ್ತದೆಂದು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಈಗಾಗಲೇ ಒಂದು ವರ್ಷ ಆಗಿದೆ. ಈ ವರ್ಷದಲ್ಲಿ ಸಾಧನೆ ಮಾಡಿರುವ ಪ್ರಗತಿ ಏನು? ಖರ್ಚಾಗಿರತಕ್ಕ ಹಣ ಎಷ್ಟು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

† ಶ್ರೀಮತಿ ರೇಣುಕಾ ರಾಜೇಂದ್ರನ್.—ಅಧ್ಯಕ್ಷರೆ, ಯಾವ ಯಾವ ಭಾಗಕ್ಕೆ ಎಷ್ಟೆಷ್ಟು ಹಣವನ್ನು ಉಪಯೋಗಿಸಿದ್ದೇವೆ ಎನ್ನುವ ಬಗ್ಗೆ ನಾನು ಈಗಾಗಲೇ ಉತ್ತರದಲ್ಲಿ ಸಂಕ್ಷಿಪ್ತವಾಗಿ ಕೊಟ್ಟಿದ್ದೇನೆ. ಮೊದಲನೇ ವರ್ಷದಲ್ಲಿಯೇ ಸುಮಾರು ಮೂರು ಕೋಟಿ ರೂಪಾಯಿಗಳನ್ನು ಈ ಪೆಪಲಪ್ ಮೆಂಟ್ ಆ್ಯಕ್ಟಿವಿಟೀಸ್‌ಗಾಗಿ ನಾವು ಉಪಯೋಗ ಮಾಡಿದ್ದೇವೆ. ಇನ್ನು ಎಕ್ಸ್‌ಪಾನ್ಸ್‌ಷನ್ ವರ್ಕ್ ಆಫ್ ವಿವೀಂಗ್ ಫ್ಯಾಕ್ಟರಿ, ಮತ್ತೆ ಆಟೋಮ್ಯಾಟಿಕ್ ಫೀಡರ್ಸ್ ಏನು ರೀಪ್ಲೇಸ್ ಮಾಡಬೇಕು ಎಂದು

† Indicates that remarks or speeches have not been revised by the member concerned.

ಮಾಡಿದ್ದೇವೆ ಆ ಬಗ್ಗೆ ಕೃಪು ತೆಗೆದುಕೊಂಡು ಎಲ್ಲಾ ಪೂರ್ವಬಾವಿ ಸಿದ್ಧತೆ ಮಾಡಲಾಗಿದೆ. ಸುಮಾರು ೬೦೦ ಚಾಕಿ ಸಾಕಾಣಿಕೆ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದೆ. ಇನ್ನು ಟೆಕ್ನಿಕಲ್ ಸರ್ವೀಸ್ ಸೆಂಟರ್ಸ್ ಮಾಡಿದೆ ಅವು ೬೧ ಮಾಡಬೇಕಾಗಿದ್ದು. ಅಷ್ಟನ್ನು ಮೊದಲನೇ ವರ್ಷದಲ್ಲಿಯೇ ಪೂರ್ಣಗೊಳಿಸಿದ್ದೇವೆ. ೨೫ ತಾಂತ್ರಿಕ ಸೇವಾ ಕೇಂದ್ರಗಳನ್ನು ಹೊಸ ಏರಿಯಾದಲ್ಲಿ ೩೬ ಸರ್ವೀಸ್ ಸೆಂಟರ್‌ಗಳನ್ನು ಸಾರ್ವಜನಿಕ ಕ್ಷೇತ್ರಗಳಲ್ಲಿ ಸ್ಥಾಪನೆ ಮಾಡಿದ್ದೇವೆ. ೧೫ ಕಕೂನ್ ಮಾರ್ಕೆಟ್‌ಗಳನ್ನು ಕಳೆದ ವರ್ಷ ಕೊಟ್ಟಿದ್ದೇವೆ. ಇನ್ನು ೩೦ ಬಿಲ್ಡಿಂಗ್‌ಗಳನ್ನು ಕಟ್ಟಬೇಕೆಂದು ಈಗಾಗಲೇ ಸಿದ್ಧತೆ ನಡೆದಿದೆ. ನಾನು ಫೈನಲ್ ಆಗಿ ಹೇಳ ಬೇಕಾದರೆ ಸುಮಾರು ೩ ಕೋಟಿ ರೂಪಾಯಿ ಹಣವನ್ನು ನಾವು ಈ ವರ್ಷದಲ್ಲಿ ಉಪಯೋಗಿಸುತ್ತೇವೆ.

ಶ್ರೀ ಎಂ.ಸಿ. ಬಸಪ್ಪ.—ಇಲ್ಲಿ ತಾವು ಸಂಕ್ಷಿಪ್ತವಾಗಿ ವಿವರಣೆಗಳನ್ನು ಕೊಟ್ಟಿದ್ದೀರಿ. ಆದರೆ ಈ ವರ್ಷ ಯಾವ ಯಾವ ಯೋಜನೆಗಳಿಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ?

ಶ್ರೀಮತಿ ರೇಣುಕಾ ರಾಜೇಂದ್ರನ್.—ನಾನು ಈಗಾಗಲೇ ಹೇಳಿದ್ದೇನೆ. ಮೊದಲನೇ ವರ್ಷದಲ್ಲಿ ಇಂತಿಷ್ಟು ಚಾಕಿ ಸಾಕಾಣಿಕೆ ಕೇಂದ್ರಗಳನ್ನು ತೆರೆಯಬೇಕಾಗಿದೆ, ಇಂತಿಷ್ಟು ಟೆಕ್ನಿಕಲ್ ಸೆಂಟರ್‌ಗಳನ್ನು ತೆರೆಯಬೇಕಾಗಿದೆ, ಗ್ರೈನೇಜ್ ಬಿಲ್ಡಿಂಗ್ಸ್ ಕಟ್ಟಬೇಕಾಗಿದೆ. ಈ ರೀತಿ ನಾನಾ ಯೋಜನೆಗಳನ್ನು ಹಾಕಿ ಕೊಂಡಿದ್ದೇವೆ. ಆದರೆ ಅದನ್ನೆಲ್ಲಾ ಇಲ್ಲಿ ಓದುವುದಕ್ಕೆ ಹೋದರೆ ಬಹಳ ಹೊತ್ತಾಗುತ್ತದೆ. ಏಕೆಂದರೆ ಇದು ಒಂದು ದೊಡ್ಡ ಪಟ್ಟಿ. ಪ್ರತಿ ವರ್ಷವೂ ನಾವು ಹಣವನ್ನು ಯಾವರೀತಿ ಉಪಯೋಗಿಸಬೇಕೆಂಬ ಬಗ್ಗೆ ಒಂದು ಪುಸ್ತಕವನ್ನೇ ಮುದ್ರಿಸಿದ್ದೇವೆ. ಈ ಪುಸ್ತಕವನ್ನು ತಮಗೆ ಕಳುಹಿಸಿ ಕೊಡುತ್ತೇನೆ. ತಾವು ಇದನ್ನು ಓದಿ, ಅನಂತರ ನನ್ನನ್ನು ಪ್ರಶ್ನೆ ಕೇಳಿದರೆ ಅನುಕೂಲವಾಗುತ್ತದೆ.

ಶ್ರೀ ಎಂ.ಸಿ. ಬಸಪ್ಪ.—೬೦೦ ಚಾಕಿ ಸಾಕಾಣಿಕೆ ಕೇಂದ್ರಗಳನ್ನು ಸರ್ಕಾರದವರು ಮಾಡಿರುವುದಾಗಿ ಹೇಳಿದ್ದೀರಿ. ಆದರೆ ಈ ಹಣದಿಂದ ನೀವು ಚಾಕಿ ಸಾಕಾಣಿಕೆ ಕೇಂದ್ರವನ್ನು ತೆರೆದಿದ್ದೇವೆಂದು ಏನು ಹೇಳು ತ್ತಿದ್ದೀರಿ ಅದು ಸರಿಯಲ್ಲ. ಆದರೆ ವಿಶ್ವ ಬ್ಯಾಂಕ್‌ನಿಂದ ತಂದ ಹಣವನ್ನು ಇದಕ್ಕೆ ಹಾಕಿರಬಹುದು. ನಾನು ತಮ್ಮನ್ನು ಕೇಳುವುದು ಏನೆಂದರೆ, ಸರ್ವೀಸ್ ಸೆಂಟರ್ಸ್‌ಗೆ ಎಷ್ಟು ಹಣವನ್ನು ಖರ್ಚು ಮಾಡಿ ದ್ದೀರಿ, ಸಿಲ್ಕ್ ಫಿಲೇಚರ್‌ನ್ನು ರೀಮಾಡಲ್ ಮಾಡುವುದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ?

ಶ್ರೀಮತಿ ರೇಣುಕಾ ರಾಜೇಂದ್ರನ್.—ತಾವು ಇದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರವನ್ನು ಒದಗಿಸುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ರೈತನಿಗೆ ನೇರವಾಗಿ ಕೊಡತಕ್ಕ ಸಾಲಗಳ ವಿವರಗಳನ್ನು ಇಲ್ಲಿ ಕೊಟ್ಟಿದ್ದೀರಿ. ಉದಾಹರಣೆ ಕೃಷಿ ಕ್ಷೇತ್ರಕ್ಕಾಗಿ ೧ ಸಾವಿರ ರೂ. ಎಂದು ಹೇಳಿದ್ದೀರಿ. ತಮ್ಮ ಯೋಜನೆ ಪ್ರಕಾರ ಕಳೆದಸಾರಿ ಎಷ್ಟು ಜನ ರೈತರಿಗೆ ಈ ಸಾಲ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದೀರೆಂಬು ದನ್ನು ಹೇಳುತ್ತೀರಾ?

ಶ್ರೀಮತಿ ರೇಣುಕಾ ರಾಜೇಂದ್ರನ್,—ತಾವು ಕೇಳುತ್ತಿರುವ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ತಾವು ಈ ೩ ವಿಶ್ವವಿದ್ಯಾನಿಲಯಗಳಿಗೂ ದ್ರವ್ಯ ಸಹಾಯ ಮಾಡಿದ್ದೇವೆಂದು ಹೇಳುತ್ತಿದ್ದೀರಿ ಆ ಗ್ರ್ಯಾಂಟ್ಸ್‌ನ್ನು ಇದರಲ್ಲಿ ಸೇರಿಸಿದೆಯೇ? ಒಂದು ವೇಳೆ ಸೇರಿಸಿಲ್ಲ ದಿದ್ದರೆ ಅದನ್ನೂ ಇದರಲ್ಲಿ ಸೇರಿಸಿ ಒಟ್ಟು ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೀರಾ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಇದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೇವೆಂದು ಹೇಳುವು ದಕ್ಕೆ ಬರುವುದಿಲ್ಲ. ಮುಂಜೂರಾತಿಯನ್ನು ಕೊಟ್ಟಿದ್ದೇವೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಎಂ.ಎಸ್‌ಸಿ ಸಿರಿಕಲ್ಚರ್‌ನ್ನು ಇಂಟ್ರಡೂಸ್ ಮಾಡಿದ್ದೇವೆ. ಈಗಾಗಲೇ ೧೦ ಮಂದಿ ಅಭ್ಯರ್ಥಿಗಳು ಇದರ ಉಪಯೋಗವನ್ನು ಪಡೆಯುತ್ತಿದ್ದಾರೆ. ರೀಸರ್ಚ್ ಕೆಲಸ ಈಗ ವಿವಿಧ ಹಂತಗಳಲ್ಲಿ ನಡೆಯು ತ್ತಿದೆ. In Mysore University we have opened research course. ಬಿಲ್ಡಿಂಗ್ ಕೆಲಸ ಈಗಾಗಲೇ ನಡೆಯುತ್ತಿದ್ದು ಅದು ರೆಂಟಿಲ್ ಲೆವೆಲ್‌ಗೆ ಬಂದಿದೆ. In Agriculture University also sericulture is introduced and research work is in progress.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೀರಿ?

ಶ್ರೀಮತಿ ರೇಣುಕಾ ರಾಜೇಂದ್ರನ್.—ತಾವು ಬೇರೆ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಒದಗಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಪ್ರತಿಯೊಂದು ಮನೆಗೂ ೯ ಸಾವಿರ ರೂಪಾಯಿ ಪ್ರಕಾರ ಕೊಡುವ ದಾಗಿ ಉತ್ತರ ಹೇಳಿದ್ದೀರಿ. ಇದರ ಪ್ರಕಾರ ಎಷ್ಟು ಮನೆಗಳನ್ನು ತೆಗೆದುಕೊಳ್ಳುತ್ತೀರಿ? ಬೈಕ್‌ಅಪ್ ಏನು ಕೊಟ್ಟಿದ್ದೀರಿ. ಇಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳು ಒಂದಕ್ಕೊಂದಕ್ಕೆ ಸರಿಹೊಂದಿಕೊಳ್ಳುತ್ತಿಲ್ಲ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಈಗ ನಾವು ೩ ಕೋಟಿ ರೂಪಾಯಿಗಳನ್ನು ಹೇಗೆ ಖರ್ಚು ಮಾಡಿದ್ದೇವೆಂಬುದನ್ನು ಈಗ ಹೇಳಬೇಕಾದರೆ ಸ್ವಲ್ಪ ಕಷ್ಟವಾಗುತ್ತದೆ. ಆದರೆ ತಮಗೆ ಬೇಕಾದರೆ ವಿವರ ಗಳನ್ನು ಕಳುಹಿಸಿಕೊಡುತ್ತೇನೆ. ಇತ್ತೀಚೆಗೆ ಅಂದರೆ ಫೆಬ್ರವರಿ ಕೊನೆಯ ವೇಳೆಗೆ ವಿಶ್ವ ಬ್ಯಾಂಕ್‌ನವರು ಕೊಟ್ಟಿದ್ದಂಥ ಹಣವನ್ನು ಸರಿಯಾದ ರೀತಿಯಲ್ಲೇ ಉಪಯೋಗ ಮಾಡಿದ್ದೇವೆ ಈ ಹಣವನ್ನು ಅವರು ನಮಗೆ ಕೊಟ್ಟ ಮೇಲೆ ಅಲ್ಲಿಂದ ಕೆಲವು ಅಧಿಕಾರಿಗಳು ಬಂದು ನಾವು ಯಾವುಯಾವುದಕ್ಕೆ ಎಷ್ಟೆಷ್ಟು ಹಣ ವನ್ನು ಖರ್ಚು ಮಾಡಿದ್ದೇವೆಂಬುದನ್ನು ನೋಡಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಮಾಡಿ ಹೋಗಿದ್ದಾರೆ. ನಾವು ಎಲ್ಲೆಲ್ಲಿ ಎಕ್ಸ್‌ಪ್ಯಾನ್‌ಷನ್ ಕೆಲಸವನ್ನು ಮಾಡಿದ್ದೇವೋ ಅಲ್ಲಿಗೆಲ್ಲಾ ಆ ಅಧಿಕಾರಿಗಳನ್ನು ಜೊತೆ ಯಲ್ಲೇ ಕರೆದುಕೊಂಡು ಹೋಗಿ ತೋರಿಸಿ ಕಳುಹಿಸಿದ್ದೇವೆ. ಈಗ ಆ ವಿವರಗಳನ್ನೆಲ್ಲಾ ಇಲ್ಲಿ ಹೇಳುವು ದಕ್ಕೆ ಹೋದರೆ ಬಹಳ ತಡವಾಗುತ್ತದೆ. ೨ ಲಕ್ಷ ೭೭ ಸಾವಿರ ಎಕರೆ ಪ್ರದೇಶ ಏನಿದೆ ಅಲ್ಲಿ ಹಳೇ ಕಡ್ಡಿ ಯನ್ನು ಬೆಳೆಸಲಾಗುತ್ತಿತ್ತು. ಆದರೆ ಈಗ ಅದೇ ಪ್ರದೇಶದಲ್ಲಿ ಹೊಸ ತಳಿ ಕಡ್ಡಿಯಾದ ಎಂ-೫೦ನ್ನು ಬೆಳೆಸಲಾಗುತ್ತದೆ. ಇದಕ್ಕೆ ತಾಂತ್ರಿಕ ಸಲಹೆಯನ್ನು ಕೊಡಬೇಕಾಗುತ್ತದೆ. ರೈತರಿಗೆ ಒಳ್ಳೆಯ ಮೊಟ್ಟೆ ಯನ್ನು ಒದಗಿಸಬೇಕಾಗುತ್ತದೆ. ಇನ್ನೂ ಅನೇಕ ವಿಚಾರಗಳನ್ನು ಇಲ್ಲಿ ಹೇಳಬೇಕಾಗುತ್ತದೆ.

ಆದ್ದರಿಂದ ನಾನು ತಮಗೆ ಹೇಳುವುದೇನೆಂದರೆ, ನಮ್ಮ ರೇಷ್ಮೆ ಇಲಾಖೆಯಲ್ಲಿ ಎಷ್ಟೆಷ್ಟು ಹಣವನ್ನು ಯಾವ ಯಾವ ಬಾಬಿಗೆ ಖರ್ಚುಮಾಡಿದ್ದೇವೆ ಎಂಬುದನ್ನು ವಿವರವಾಗಿ ತಿಳಿದುಕೊಳ್ಳುವ ಆಸಕ್ತಿ ಇರುವ ಸದಸ್ಯರುಗಳು ಯಾವುದಾದರೂ ಒಂದು ದಿನವನ್ನು ಗೊತ್ತುಮಾಡಿಕೊಂಡು ಬಂದರೆ ಒಂದು ಸಭೆಯನ್ನು ನಡೆಸಿ ತಮಗೆ ಬೇಕಾದ ಅಂಕಿ ಅಂಶಗಳನ್ನು ಒದಗಿಸಿಕೊಡುತ್ತೇನೆ.

ಶ್ರೀ ಎಂ.ಸಿ. ಬಸಪ್ಪ.—ಸ್ವಾಮಿ, ನಮಗೆ ಒದಗಿಸಿರತಕ್ಕ ಇಂಗ್ಲೀಷ್ ಪ್ರತಿಯಲ್ಲಿ ೩ನೇ ಐಟಂನಲ್ಲಿ ಫಿಲೇಚರ್‌ಗೆ ೫೯ ಲಕ್ಷ ರೂ. ಗಳನ್ನು ಪ್ರೊವೈಡ್ ಮಾಡಿದ್ದೀರಿ. ಮತ್ತು ೪ನೇ ಐಟಂನಲ್ಲಿ ಅದೇ ಫಿಲೇಚರ್‌ಗೋಸ್ಕರ ೪ ಕೋಟಿ ೨೪ ಲಕ್ಷ ಪ್ರೊವೈಡ್ ಮಾಡಿದ್ದೀರಿ ಈ ರೀತಿ ಅನಾಮಲಿ ಬರಲು ಕಾರಣ ಏನು? ಇದು ಒಂದಕ್ಕೊಂದಕ್ಕೆ ಸರಿಹೊಂದುವುದಿಲ್ಲ ಕರ್ನಾಟಕ ಸಿಲ್ಕ್ ಫಿಲೇಚರ್ ಇಂಡಸ್ಟ್ರೀಸ್ ನವರೇ ಈ ಎಲ್ಲ ಇಂಡಸ್ಟ್ರೀಸ್‌ನ್ನೂ ತೆಗೆದುಕೊಳ್ಳುವುದಿಲ್ಲವೆ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಈ ಸಿಲ್ಕ್ ಫಿಲೇಚರನ್ನು ಆಧುನೀಕರಣ ಮಾಡಬೇಕೆಂದಿ ದ್ದೇವೆ. ಆ ಪ್ರಕಾರ ನಾವು ಸಿಲ್ಕ್ ಫಿಲೇಚರ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಬರತಕ್ಕ ಹಣವನ್ನು ಕೊಡಬೇಕಾಗುತ್ತದೆ.

Regional Workshop for Hassan City

938 Sri H. D. Deve Gowda (Holenarasipur).—Will the Minister for Transport and Minor Irrigation, be pleased to state:—

(a) whether it is fact that the K.S.R.T.C. has decided to establish Regional Workshop at Hassan;

(b) if so, when the work will be started;

(c) the amount provided for this work during this year;

(d) if so, the number of years required to complete this work?